# ಶಾಸನೋಕ್ತ ವೀರಗಲ್ಲಿನಲ್ಲಿ ವೃತ್ತಿ ಸಮುದಾಯಗಳು

**ಅನುಪಮ ಸಿ.**

ಸಂಶೋಧನಾರ್ಥಿ, ಇತಿಹಾಸ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.

**Received: 24-11-2023 ; Acepted: 24-03-2024 ; Published: 13-08-2024**

**DOI: https://doi.org/10.5281/zenodo.13294263**

**ABSTRACT:**

ಹಾಸನ ಜಿಲ್ಲಾ ಪರಿಸರವು ಹೊಯ್ಸಳರ ವಾಸ್ತು ರಚನೆಗಳ ತವರುಮನೆ. ಪ್ರಸ್ತುತ ವಿದ್ಯಾಕಾಶಿ ಮತ್ತು ಹೈಟೆಕ್ ನಗರವಾಗಿ ಬೆಳೆಯುತ್ತಿದೆ. ಹಾಸನ, ಬೇಲೂರು, ಹೊಳೆನರಸೀಪುರ, ಆಲೂರು, ಅರಸೀಕೆರೆ, ಸಕಲೇಶಪುರ, ಚನ್ನರಾಯಪಟ್ಟಣ, ಅರಕಲಗೂಡು ಸೇರಿದಂತೆ ಪ್ರಸ್ತುತ ಜಿಲ್ಲೆಯಲ್ಲಿ 8 ತಾಲೂಕುಗಳಿವೆ. ಹಾಸನ ಜಿಲ್ಲೆಯ ಪೂರ್ವ ಭಾಗಕ್ಕೆ ತುಮಕೂರು ಮತ್ತು ಮಂಡ್ಯ, ಪಶ್ಚಿಮಕ್ಕೆ ಮಂಗಳೂರು ಮತ್ತು ಚಿಕ್ಕಮಗಳೂರು, ಉತ್ತರಕ್ಕೆ ಚಿತ್ರದುರ್ಗ, ದಕ್ಷಿಣಕ್ಕೆ ಕೊಡಗು ಮತ್ತು ಮೈಸೂರು ಜಿಲ್ಲೆಗಳಿಂದ ಸುತ್ತುವರಿದಿವೆ. ಹಾಸನ ಜಿಲ್ಲೆಯಲ್ಲಿ ಶಾಸನೋಕ್ತ ವೀರಗಲ್ಲುಗಳಿದ್ದು, ಕೆಲವೊಂದು ಶಾಸನೋಕ್ತ ವೀರಗಲ್ಲಿನಲ್ಲಿ ವೃತ್ತಿ ಸಮುದಾಯದ ಉಲ್ಲೇಖವಿದೆ. ಉಲ್ಲೇಖವಾಗಿರುವ ವೃತ್ತಿ ಸಮುದಾಯದ ಕುರಿತು ಪ್ರಸ್ತುತ ಲೇಖನದಲ್ಲಿ ಚರ್ಚಿಸಲಾಗಿದೆ.

**KEYWORDS:**

ಬೆಂಡೆಕೆರೆ ಸಿದ್ದೇಶ್ವರ, ಅರಸೀಕೆರೆ, ಕಲ್ಲುಂಡಿ ಗ್ರಾಮ, ಹಲಕೂರ ದೇವಸ್ಥಾನ, ತಳಲುತೊರೆ, ಮಾದಲಗೆರೆ.

ಮೌರ್ಯರು, ಶಾತವಾಹನರು, ಕದಂಬರು, ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ನೊಳಂಬರು, ಸೇವುಣರು, ವಿಜಯನಗರದ ಅರಸರು, ಪಾಳೆಯಗಾರರು, ಮೈಸೂರಿನ ಒಡೆಯರು ಪ್ರಮುಖರಾಗಿದ್ದು, ಇವರು ತಮ್ಮ ಆಳ್ವಿಕೆಯ ಅವಧಿಯಲ್ಲಿ ಅನೇಕ ಶಾಸನಗಳನ್ನು ಹಾಕಿಸಿದ್ದರಲ್ಲದೆ, ಅನೇಕ ದೇವಾಲಯಗಳು, ಕೋಟೆಗಳು, ಅರಮನೆಗಳು, ಕೆರೆ-ಕಟ್ಟೆಗಳು, ಬಾವಿಗಳು, ವೀರಗಲ್ಲುಗಳು, ಸತಿಗಲ್ಲುಗಳು, ನಿಸಧಿಗಲ್ಲುಗಳು ಮುಂತಾದ ಸ್ಮಾರಕ ಶಿಲ್ಪಗಳನ್ನು ಹಾಸನ ಜಿಲ್ಲೆಯಲ್ಲಿ ಬಿಟ್ಟು ಹೋಗಿದ್ದಾರೆ. ಇಂತಹ ಸ್ಮಾರಕಗಳಿಂದ ಆಯಾಯ ರಾಜ ಮನೆತನಗಳ ಕಾಲದ ರಾಜಕೀಯ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳ ಬಗ್ಗೆ ತಿಳಿಯಲು ಸಾಧ್ಯವಾಗುತ್ತದೆ. ಶಾಸನೋಕ್ತ ವೀರಗಲ್ಲುಗಳನ್ನು ಅಧ್ಯಯನ ಮಾಡಿದಾಗ ವೃತ್ತಿ ಸಮುದಾಯಗಳಾದ ಕುರುಬ, ಯಾದವ, ಶೆಟ್ಟಿ, ಮಾದಿಗ, ಕಮ್ಮಾರ, ಮಡಿವಾಳ, ಬಡಗಿ, ಅಕ್ಕಸಾಲಿಗ ಮತ್ತು ನಾಯಕ ಸಮುದಾಯಗಳ ಬಗ್ಗೆ ಉಲ್ಲೇಖವಾಗಿರುವುದು ತಿಳಿದುಬಂದಿದೆ.

ಶಾಸನದ ಪಾಠದಲ್ಲಿ ವೀರನ ಕುರಿತು ವಿವರಣೆ ಇರುವ ಕಾರಣ ವೀರಶಾಸನವೆಂದು ಕರೆಯಲಾಗಿದೆ. ವೀರಗಲ್ಲುಗಳ ಮೇಲೆ ಶಾಸನದ ಪಾಠವಿದ್ದರೆ ಶಾಸನೋಕ್ತ

ವೀರಗಲ್ಲುಗಳೆಂದು ಕರೆಯುತ್ತೇವೆ. ಶಾಸನೋಕ್ತ ವೀರಗಲ್ಲುಗಳನ್ನು ಹಲವು ಉದ್ದೇಶಗಳಿಗೆ ಹಾಕಿಸಿದ್ದು, ಪ್ರಸ್ತುತ ಹಾಸನ ಜಿಲ್ಲೆಯಲ್ಲಿ ಕಂಡು ಬಂದಿರುವ ವೀರಗಲ್ಲುಗಳಲ್ಲಿರುವ ವೃತ್ತಿ ಸಮುದಾಯದ ವಿವರಣೆಯನ್ನು ಈ ಕೆಳಗಿನಂತೆ ನೋಡಬಹುದು.

**1. ಅರಸೀಕೆರೆ ಹೊಂಡದ ದಾರಿಯಲ್ಲಿರುವ ವೀರಗಲ್ಲು (ಕ್ರಿ.ಶ. 1311):**

**ಉಲ್ಲೇಖ:** ಮಲ್ಲಸೆಟ್ಟಿಯ ತಮ್ಮ ವೀರಸೆಟ್ಟಿ ಕಳ್ಳನನ್ನು ಕೊಂದು ಸುರಲೋಕಕ್ಕೆ ಹೋದನೆಂದು ಮತ್ತು ವೀರಸೆಟ್ಟಿಯ ನೆನಪಿಗಾಗಿ ಕೇತಬ್ಬೆ ವೀರಗಲ್ಲನ್ನು ನಿಲ್ಲಿಸಿದ್ದಳು ಎಂಬ ಮಾಹಿತಿಯನ್ನು ಗಮನಿಸಲಾಗಿದೆ. ಇಲ್ಲಿ ಕೇತಬ್ಬೆ ಎಂಬ ಹೆಣ್ಣು ವೀರಗಲ್ಲನ್ನು ನಿಲ್ಲಿಸಿದ್ದು ವಿಶೇಷವಾಗಿದೆ.

**2. ಅರಸಿಕೆರೆ ಹೊಂಡಗಟ್ಟಿನಲ್ಲಿ ನೆಟ್ಟಿರುವ ವೀರಗಲ್ಲು (ಕ್ರಿ.ಶ. 1348):**

**ಉಲ್ಲೇಖ:** ಮಹಾಪ್ರಧಾನ ಹೆಗ್ಗಡೆಯವರ ಮನೆಗೆ ಕಳ್ಳರು ನುಗ್ಗಿದಾಗ ಬಮ್ಮನು ಹೋರಾಟದಲ್ಲಿ ಮರಣ ಹೊಂದುತ್ತಾನೆ ಎಂಬ ವಿವರಣೆಯಿದೆ.

**3. ಬೆಂಡೆಕೆರೆ ಸಿದ್ದೇಶ್ವರ ದೇವಾಲಯದಲ್ಲಿರುವ ವೀರಗಲ್ಲು (ಕ್ರಿ.ಶ. 1231):**

**ಉಲ್ಲೇಖ:** ಈ ಶಾಸನೋಕ್ತ ವೀರಗಲ್ಲಿನಲ್ಲಿ ವೀರನರಸಿಂಹನ ಕಾಲದಲ್ಲಿ ಬಿಲೆಸೆಟ್ಟಿಯ ಮಗ ಯಾವ ಕಾರಣಕ್ಕಾಗಿ ಪ್ರಾಣಬಿಟ್ಟನೆಂದು ವಿವರಣೆಯಿದ್ದು, ಶಾಸನದ ಅಕ್ಷರಗಳು ತೃಟಿತವಾಗಿವೆ.

**4. ಕಲ್ಲುಗಂಡಿ ಗ್ರಾಮದ ಉತ್ತರಕ್ಕಿರುವ ವೀರಗಲ್ಲು (9ನೇ ಶತಮಾನ):**

**ಉಲ್ಲೇಖ:** ಪೆರ್ಮಾಡಿ ರಾಜ್ಯವಾಳುತ್ತಿರುವಾಗ ಪೆಗ್ಗಡೆನಾಯಕನು ತುರುಗಳಿಗಾಗಿ ಕಾಳಗದಲ್ಲಿ ಸಾಯುತ್ತಾನೆ.

**5. ಹಲಕೂರ ದೇವಸ್ಥಾನದ ಬಳಿ ಇರುವ ವೀರಗಲ್ಲು (ಕ್ರಿ.ಶ. 1303):**

**ಉಲ್ಲೇಖ:** ಹಲಕೂರನಲ್ಲಿ ದನವನ್ನು ಹಿಡಿಯುವಾಗ ದನಗಳು ಇರಿದಾಗ ಜಕ್ಕಗೌಡನು ಮರಣ ಹೊಂದುತ್ತಾನೆ. ಮುಖ್ಯವಾಗಿ ಹೊಯ್ಸಳರ ಕಾಲದಲ್ಲಿಯೇ ಇಂದಿನ ಹಲಕೂರ ಊರಿನ ಹೆಸರು ಉಲ್ಲೇಖವಾಗಿರುವುದನ್ನು ಗಮನಿಸಬೇಕು.

**6. ಶಂಕರನಹಳ್ಳಿ ಈಶ್ವರ ದೇವಾಲಯದಲ್ಲಿ ನೆಟ್ಟಿರುವ ವೀರಗಲ್ಲು (ಹೊಯ್ಸಳ ಕಾಲ):**

**ಉಲ್ಲೇಖ:** ಕಂಣಯನಾಯಕನು ಮತ್ತು ಕುರುಬರ ಚಾಯ್ಕಯ ನಾಯಕ ಕಾದಾಡಿದಾಗ ಚಾಯ್ಕಯ ನಾಯಕನು ಮರಣ ಹೊಂದುತ್ತಾನೆ. ಶಾಸನದಲ್ಲಿ ವೈಕುಂಠ ಪ್ರಾಪ್ತನಾದನೆಂದು ಉಲ್ಲೇಖವಾಗಿರುವುದರಿಂದ ಶಾಸನವು ವೈಷ್ಣವ ಪಂಥವನ್ನು ಸೂಚಿಸುತ್ತದೆ.

**7. ತಳಲುತೊರೆ ವೀರಗಲ್ಲು (ಕ್ರಿ.ಶ. 1278):**

**ಉಲ್ಲೇಖ:** ಸಿಂಗೆಯ ದಣ್ಣಾಯಕನು ಕೊಲೆಯಾದ ನಂತರ, ಕೊಲೆ ಮಾಡಿದವನ

ವೀರುದ್ಧ ರಾಮ ಗುರುಗಳ ಮಗ ಕಲ್ಲಯ್ಯನು ಮರಣ ಹೊಂದುತ್ತಾನೆ. ಈ ಕಾರಣದಿಂದ ಆತನನ್ನು ವೀರ ದೀರನೆಂದು ಹೊಗಳಿದ್ದಲ್ಲದೆ ನಂದಿನಾಥ ವೀರಭದ್ರ ಮೆಚ್ಚಿಗೆ ವ್ಯಕ್ತಪಡಿಸಿದರೆಂಬ ಮಾಹಿತಿ ಇದೆ.

**8. ಗಂಡಸಿ ಅಗಳಿನ ಬಳಿ ಇರುವ ವೀರಗಲ್ಲು (ಹೊಯ್ಸಳರ ಕಾಲ):**

**ಉಲ್ಲೇಖ:** ಈ ಶಾಸನೊಕ್ತ ವೀರಗಲ್ಲಿನಲ್ಲಿ ಯಾವ ಕಾರಣಕ್ಕೆ ಯಾರು ಮರಣ ಹೊಂದಿದರೆಂಬ ವಿವರಣೆಯು ತೃಟಿತವಾಗಿದೆ. ಆದರೆ ರಾಜನನ್ನು ಹೊಗುಳುವ ವಿವರಣೆ ಇದ್ದು, ಇದರಲ್ಲಿ ಜಾತಿ ಉಲ್ಲೇಖವಾಗಿದೆ. ಮಹಾರಾಜಧಿರಾಜ ರಾಜಪರಮೇಶ್ವರಂ ಯಾದವಕುಲಾಂರದ್ಯುಮಣಿ ಹೊಯ್ಸಣ ವೀರಬಲ್ಲಾಳರಾಯಂ ರಾಜ್ಯವಾಳುತ್ತಿದ್ದನೆಂದು ಉಲ್ಲೇಖವಾಗಿದ್ದು, ಹೊಯ್ಸಳರು ಯಾದವರೆಂದು ಈ ಶಾಸನದ ಮೂಲಕ ನಿರ್ಧರಿಸಲಾಗಿದೆ. ಗಂಡಸಿ ಎನ್ನುವ ಬದಲಾಗಿ ಗಂಡಸೆ ಎಂದು ಉಲ್ಲೇಖವಾಗಿರುವುದನ್ನು ಗಮನಿಸಬಹುದು.

**9. ಕಲ್ಲಹಳ್ಳಿ ಭೈರದೇವರ ಗುಡಿಯ ಬಳಿ ಇರುವ ವೀರಗಲ್ಲು (ಕ್ರಿ.ಶ. 1279):**

**ಉಲ್ಲೇಖ:** ಭೈರದೇವರ ಸನ್ನಿದಾನದಲ್ಲಿ ಮಾದಿಗನು ಆಳಾಗಿ ಕೆಲಸ ಮಾಡುತ್ತಾ ಮರಣ ಹೊಂದಿದನೆಂದು ಮಾಹಿತಿ ನೀಡುತ್ತದೆ. 13ನೇ ಶತಮಾನದಲ್ಲಿ ಮಾದಿಗರು ಸೇವೆ ಮಾಡುತ್ತಲೆ ತಮ್ಮ ಜೀವನ ನಡೆಸುವುದರ ಜೊತೆಗೆ ಜೀವವನ್ನು ಬಿಡುತ್ತಿದ್ದರೆಂದು ಅರ್ಥವಾಗುತ್ತದೆ.

**10. ಮೊಸಳೆ ದೇವಸ್ಥಾನದಲ್ಲಿರುವ ವೀರಗಲ್ಲು (ಕ್ರಿ.ಶ. 1226):**

**ಉಲ್ಲೇಖ:** ಮೊಸಳೆಯ ಮಡಿವಾಳ ರಾಮಯ್ಯನ ಮಗ ನಾಗಣ ಮರಣ ಹೊಂದಿದನೆಂದು ಮಾಹಿತಿ ಇದೆ. ಮೊಸಳೆ ಎಂಬ ಊರಿನ ಹೆಸರನ್ನು ಸೂಚಿಸುವುದಲ್ಲದೆ ಮಡಿವಾಳ ಎಂಬ ಜಾತಿಯನ್ನು ಉಲ್ಲೇಖಿಸಿದ್ದಾರೆ.

**11. ಮಾದಲಗೆರೆ ಕೆರೆಯ ಹಿಂದೆ ಈಶ್ವರ ದೇವಸ್ಥಾನದ ಬಳಿ ಇರುವ ವೀರಗಲ್ಲು (12-13ನೇ ಶತಮಾನ):**

**ಉಲ್ಲೇಖ:** ಒಟ್ಟು 9 ಸಾಲುಗಳಿರುವ ಶಾಸನೋಕ್ತ ವೀರಗಲ್ಲಿನಲ್ಲಿ ಮೊದಲ ಮೂರು ಸಾಲುಗಳು ತೃಟಿತವಾಗಿವೆ. ಸೋವಗೌಡನು ಕದನದಲ್ಲಿ ಮರಣ ಹೊಂದಿದಾಗ, ವೀರಮರಣದ ನೆನಪಿಗಾಗಿ ಸೋವಗೌಡನ ಮಾವ ವೀರಗಲ್ಲನ್ನು ಮಾಡಿಸಿದನು. ಇದೇ ವೀರಗಲ್ಲನ್ನು ಪುಲಿಗೆರೆ ಆಚಾರಿ ಲಖೋಜನ ಮಗ ಬ್ರಮಪಂಡಿತರು ಮಾಡಿದ್ದು ಎಂದು ಉಲ್ಲೇಖವಾಗಿದೆ. ಆಚಾರಿಗಳನ್ನು ಅಂದರೆ ವಿಶ್ವಕರ್ಮಿಗಳನ್ನು ಬಳಸಿಕೊಂಡು ವೀರಗಲ್ಲನ್ನು ಕೆತ್ತನೆ ಮಾಡಿಸುತ್ತಿದ್ದರೆಂದು ಅರ್ಥೈಸಬಹುದು.

**12. ಹಿರೀಬೆಳಗುಲಿ ಮಲ್ಲೇಶ್ವರ ದೇವಸ್ಥಾನದ ಬಲಗಡೆ ಇರುವ ವೀರಗಲ್ಲು (13-13ನೇ ಶತಮಾನ):**

**ಉಲ್ಲೇಖ:** ಒಟ್ಟು 10 ಸಾಲುಗಳಿದ್ದು, ಮೂರು ಪಟ್ಟಿಕೆಗಳಲ್ಲಿ ಶಾಸನವನ್ನು ರಚಿಸಿದ್ದಾರೆ. ಕೆತಮಲ್ಲನಾಯಕನು ಗೋವುಗಳ ರಕ್ಷಣಾ ಕದನದಲ್ಲಿ ವೀರಮರಣ ಹೊಂದಿದನು. ಈ ವಿವರಣೆಯ ಜೊತೆಗೆ ಹೊನ್ನೆಶೆಟ್ಟಿಯ ಉಲ್ಲೇಖವಿದೆ.

**13. ಬಸವಾಪಟ್ಟಣ ಪ್ರಣತಾರ್ತಿ ಹರೇಶ್ವರ ದೇವಾಲಯದ ಪಕ್ಕದಲ್ಲಿರುವ ವೀರಗಲ್ಲು (ಕ್ರಿ.ಶ. 1280):**

**ಉಲ್ಲೇಖ:** ಒಟ್ಟು 5 ಸಾಲುಗಳಿದ್ದು, ಮಯ್ಯನ ಮಗ ಲಾಳಮಾಚೆಯ ನಾಯಕನು ಕುದುರೆ ಕಾಳಗದಲ್ಲಿ ವೀರಮರಣ ಹೊಂದಿದ್ದಕ್ಕೆ ತಮ್ಮ ವೀರಗಲ್ಲನ್ನು ಕೆತ್ತಿಸಿದನೆಂದು ಉಲ್ಲೇಖಿಸಿದೆ.

**14. ಕೈಗೋಡುನಲ್ಲಿರುವ ಐದನೆ ವೀರಗಲ್ಲು (ಕ್ರಿ.ಶ 13ನೇಶತಮಾನ):**

**ಉಲ್ಲೇಖ:** ಈ ಶಾಸನವು ನಾಲ್ಕು ಸಾಲುಗಳಿಂದ ಕೂಡಿದ್ದು, 13ನೇ ಶತಮಾನಕ್ಕೆ ಸೇರಿದೆ. ಶಾಸನದಲ್ಲಿ ಲೆಖೋಂಜನು ಗೋ ಕದನದಲ್ಲಿ ಸತ್ತನೆಂದು ಈತನ ಅಣ್ಣ ಬಮ್ಮೋಜನು ಮತ್ತು ಗೌಡರು ಸೇರಿಕೊಂಡು ವೀರಗಲ್ಲನ್ನು ನಿಲ್ಲಿಸಿದರೆಂದು ಉಲ್ಲೇಖಿಸುತ್ತದೆ. ಇಲ್ಲಿ ಗೌಡರು ಎನ್ನುವ ಪದವು ಮೇಲ್ವರ್ಗದ ಸಮುದಾಯವನ್ನು ಸೂಚಿಸುತ್ತದೆ.

**15. ಹೆಣ್ಣೂರು ಗೋಮಾಳದಲ್ಲಿರುವ ವೀರಗಲ್ಲು (10ನೇ ಶತಮಾನ):**

**ಉಲ್ಲೇಖ:** ಈ ಶಾಸನವು ತುರುಗೋಳ್ ವೀರಗಲ್ಲಾಗಿದ್ದು, 9 ಸಾಲುಗಳಲ್ಲಿವೆ. ಶಾಸನದಲ್ಲಿ ಹೊಲೆಯ ಗಾವುಣ್ಡ ಎಂದು ಉಲ್ಲೇಖವಿದ್ದು, ಗಾವುಣ್ಡ ಎಂದರೆ ಗೌಡ ಎಂದರ್ಥ. ಇಲ್ಲಿ ಹೊಲೆಯ ಎನ್ನುವ ಪದವನ್ನು ಗಮನಿಸಿದಾಗ ಹೊಲೆಯರಲ್ಲಿ ಗೌಡರು ಇದ್ದರೆಂದು ಹೇಳಬಹುದು. ಅಲ್ಲದೆ ಹೊಲೆಯ ಎಂದು ಕೆಳಜಾತಿಯನ್ನು ಉಲ್ಲೇಖಿಸಿರುವುದನ್ನು ಗಮನಿಸಬೇಕು.

**16. ನಿಟ್ಟೂರು ಸೋಮೇಶ್ವರ ದೇವಾಲಯದ ಪೂರ್ವಕಡೆ ನೆಟ್ಟಿರುವ ವೀರಗಲ್ಲು (ಕ್ರಿ.ಶ. 1213):**

**ಉಲ್ಲೇಖ:** ವೀರಗಲ್ಲಿನಲ್ಲಿ ಎರಡು ಪಟ್ಟಿಗಳಿದ್ದು, ಮೊದಲ ಪಟ್ಟಿಕೆಯಲ್ಲಿ 7 ಮತ್ತು ಎರಡನೆ ಪಟ್ಟಿಕೆಯಲ್ಲಿ 7 ಸಾಲಿನಲ್ಲಿ ಶಾಸನವಿದೆ. ಒಟ್ಟು 14 ಸಾಲಿನ ಶಾಸನೋಕ್ತ ವೀರಗಲ್ಲಾಗಿದ್ದು, ಕ್ರಿ.ಶ. 1213ರಲ್ಲಿ ರಚನೆಯಾಗಿದೆ. ಶಾಸನದಲ್ಲಿ ಸತ್ತ ದೇವಣ್ಣ ಮತ್ತು ಮಾರಯ್ಯನ ತಂದೆ ಬೇಡ ಜಕ್ಕನೆಂದು ಉಲ್ಲೇಖಿಸುತ್ತದೆ. ಶಾಸನದಲ್ಲಿ ಉಲ್ಲೇಖವಾಗಿರುವ ಬೇಡ ಎಂಬ ಪದವು ಬೇಡ ಜನಾಂಗವನ್ನು ಅಥವಾ ನಾಯಕ ಜನಾಂಗವನ್ನು ಸೂಚಿಸುತ್ತದೆ.

**17. ನಿಟ್ಟೂರು ಕಲ್ಲೆ ದೇವಾಲಯದ ದಕ್ಷಿಣಕ್ಕೆ ನೆಟ್ಟಿರುವ ವೀರಗಲ್ಲು (ಕ್ರಿ.ಶ.1140):**

**ಉಲ್ಲೇಖ:** ಒಟ್ಟು 9 ಸಾಲಿನ ಶಾಸನೋಕ್ತ ವೀರಗಲ್ಲಿನಲ್ಲಿ ಹೊಯ್ಸಳ ದೊರೆ ಹಾನಗಲ್ಲು ಕೋಟೆಯನ್ನು ಮುತ್ತಿಗೆ ಹಾಕಿದಾಗ ಬಾಳುಗಿ ಚಟ್ಟನು ಹೋರಾಟದಲ್ಲಿ ಮರಣ

ಹೊಂದಿದನೆಂದು ಉಲ್ಲೇಖವಿದೆ. ಅಲ್ಲದೆ ಹೆಗ್ಗಡೆ ಬಿಣ್ಣಯ್ಯನ ಉಲ್ಲೇಖವಿದ್ದು, ಹೆಗ್ಗಡೆ ಕುಲದ ಉಲ್ಲೇಖವಿರುವುದನ್ನು ಕಾಣಬಹುದು.

### 18. ಹೊನ್ನಾವರ ಸೋಮೇಶ್ವರ ದೇವಾಲಯದ ದಕ್ಷಿಣಕ್ಕೆ ನೆಟ್ಟಕಲ್ಲು (ಕ್ರಿ.ಶ. 1117):

**ಉಲ್ಲೇಖ:** ಈ ವೀರಗಲ್ಲಿನಲ್ಲಿ 9 ಸಾಲುಗಳಲ್ಲಿ ಶಾಸನವಿದ್ದು, ಗಡಿಕಾಳಗವನ್ನು ವಿವರಿಸುತ್ತದೆ. ಹೊನ್ನವರ ಮತ್ತು ನೀರಗುಂದ ಗಡಿಗಾಗಿ ಹೊನ್ನಗವುಡ ಮರಣ ಹೊಂದಿದನು. ಈ ನೆನಪಿಗಾಗಿ ಹಡಪದ ಹೆಗ್ಗಡೆ ಮಂಚಿಯಣ್ಣನು ವೀರಗಲ್ಲನ್ನು ಹಾಕಿಸಿದನೆಂದು ವಿವರಣೆಯಿದೆ.

ಈ ರೀತಿಯಾಗಿ ಶಾಸನೋಕ್ತ ವೀರಗಲ್ಲಿನಲ್ಲಿ ವೃತ್ತಿ ಸಮುದಾಯವನ್ನು ಉಲ್ಲೇಖಿಸಿವೆ. ಈ ಮೇಲಿನ ವೀರಗಲ್ಲುಗಳನ್ನು ಗಮನಿಸಿದಾಗ ಸೆಟ್ಟಿ, ಯಾದವ, ಕುರುಬ, ಮಾದಿಗ, ಮಡಿವಾಳ, ಹಡಪದವರು, ಗೌಡರು, ಹೊಲೆಯರು, ಗುರುದೀಕ್ಷೆ ಪಡೆದವರು (ಐಗಳು), ಹೆಗ್ಡಡೆ ವಂಶ ಮೊದಲಾದ ಜಾತಿಯವರು ವಿವಿಧ ಕಾಳಗದಲ್ಲಿ ಮರಣ ಹೊಂದುವುದರ ಮೂಲಕ ವೀರರಾಗಿದ್ದರೆಂದು ನಿರ್ಧರಿಸಬಹುದು. ಅಲ್ಲದೆ ಊರಿನ ಹೆಸರನ್ನು ಸೂಚಿಸಿರುವುದರಿಂದ ಮತ್ತಷ್ಟು ಅಧ್ಯಯನಕ್ಕೆ ಅನುವು ಮಾಡಿಕೊಟ್ಟಿದೆ. ವೀರಗಲ್ಲನ್ನು ಕೇವಲ ಪುರುಷರು ಮಾತ್ರವಲ್ಲದೆ ಮಹಿಳೆಯರು ನಿಲ್ಲಿಸಲ್ಪಡುತ್ತಿದ್ದರೆಂದು ಈ ಅಧ್ಯಯನದಿಂದ ತಿಳಿದು ಬಂದಿದೆ.

### ಪರಾಮರ್ಶನ ಗ್ರಂಥಗಳು:


1. ಶೇಷಶಾಸ್ತ್ರಿ ಆರ್. (2004). ಕರ್ನಾಟಕದ ವೀರಗಲ್ಲುಗಳು. ಕನ್ನಡ ಸಾಹಿತ್ಯ ಪರಿಷತ್. ಬೆಂಗಳೂರು.
2. ಗೋಪಾಲ್ ಆರ್. (ಸಂ). (2010). ಹಾಸನ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ. ಪ್ರಾಚ್ಯವಸ್ತು ಸಂಗ್ರಾಹಾಲಯ. ಮೈಸೂರು.
3. ಸೂರ್ಯನಾಥ ಕಾಮತ್. (2015). ಕರ್ನಾಟಕದ ಸಂಕ್ಷಿಪ್ತ ಪರಿಚಯ. ಎಂ.ಸಿ.ಸಿ. ಪಬ್ಲಿಕೇಷನ್ಸ್. ಮೈಸೂರು.
4. ಚಿದಾನಂದಮೂರ್ತಿ ಎಂ. (2008). ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಸ್ವಪ್ನ ಬುಕ್ ಹೌಸ್. ಬೆಂಗಳೂರು.



**Funding:**
This study was not funded by any grant.

**Conflict of interest:**
The Authors have no conflict of interest to declare that they are relevant to the content of this article.



**About the License:**
© The Authors 2024. The text of this article is open access and licensed under a Creative Commons Attribution 4.0 International License.